# ಕರ್ನಾಟಕ ರಾಜ್ಯ ಹಜ್ ಸಮಿತಿ

## ಮಾಹಿತಿ ಕಾಯಿದೆ 2005ಗಾಗಿ ಕೈಪಿಡಿ

## ಪ್ರಕರಣ 4 (1) (ಬಿ)

(ಮಾರ್ಚ್ 2023 ರ ಅಂತ್ಯಕ್ಕೆ ಪರಿಷ್ಕೃತ)

**ಪರಿಚಯ**

1.1 ಸಾರ್ವಜನಿಕ ಪ್ರಾಧಿಕಾರಗಳ ಕೆಲಸದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಉತ್ತೇಜಿಸಲು ಮತ್ತು ಪ್ರತಿ ಸಾರ್ವಜನಿಕ ಪ್ರಾಧಿಕಾರದ ನಿಯಂತ್ರಣದಲ್ಲಿ ನಾಗರಿಕರಿಗೆ ಮಾಹಿತಿಯನ್ನು ಪಡೆಯುವ ಅಧಿಕಾರ ನೀಡಲು, ಭಾರತ ಸರ್ಕಾರವು "ಮಾಹಿತಿ ಹಕ್ಕು ಕಾಯ್ದೆ, 2005", (RTI Act) ನ್ನು ದಿನಾಂಕ 15-06-2005 ರಿಂದ ಜಾರಿಗೆ ತಂದಿರುತ್ತದೆ, ಈ ಕಾಯ್ದೆಯ ಸೆಕ್ಷನ್ 4(1) (ಬಿ) ರ ನಿಬಂಧನೆಗಳಿಗೆ ಅನುಗುಣವಾಗಿ ಕರ್ನಾಟಕ ರಾಜ್ಯ ಹಜ್ ಸಮಿತಿಯು ಸಾರ್ವಜನಿಕರ ಮತ್ತು ಇತರರ ಮಾಹಿತಿ ಮತ್ತು ಮಾರ್ಗದರ್ಶನಕ್ಕಾಗಿ ಈ ಕೈಪಿಡಿ ಹೊರತರುತ್ತಿದೆ.

1.2 ಕರ್ನಾಟಕ ರಾಜ್ಯ ಹಜ್ ಸಮಿತಿಯು ಶ್ರೀ ಅಬ್ಬಾಸ್ ಷರೀಫ್, (ನಿವೃತ್ತ ಸರ್ಕಾರದ ಉಪ ಕಾರ್ಯದರ್ಶಿಯವರು) ನೋಡಲ್ ಅಧಿಕಾರಿಯವರನ್ನು ತನ್ನ ಸಾರ್ವಜನಿಕ ಮಾಹಿತಿ ಅಧಿಕಾರಿ (PIO) ಆಗಿ ಸಮಿತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ನೇಮಿಸಿದೆ.

1.3 ಕಾಯಿದೆಯಡಿ ಯಾವುದೇ ಮಾಹಿತಿ ಅಗತ್ಯವಿರುವ ಯಾವುದೇ ವ್ಯಕ್ತಿ ಕರ್ನಾಟಕ ರಾಜ್ಯ ಹಜ್ ಸಮಿತಿಯ ನೋಡಲ್ ಅಧಿಕಾರಿ ಶ್ರೀ ಅಬ್ಬಾಸ್ ಷರೀಫ್ ಅವರನ್ನು ಸಂಪರ್ಕಿಸಬಹುದು. ಅವರ ಕಚೇರಿ ದೂರವಾಣಿ ಸಂಖ್ಯೆ: 080-28567673.

1.4 ಸಮಿತಿಯು ಕರ್ನಾಟಕ ರಾಜ್ಯ ಹಜ್ ಸಮಿತಿಯ ಸದಸ್ಯ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಸರ್ಫರಾಜ್ ಖಾನ್ ಅವರನ್ನು ಕಾಯ್ದೆಯ ಸೆಕ್ಷನ್ 19 (1) ರ ಅಡಿಯಲ್ಲಿ ಮೇಲ್ಮನವಿ ಪ್ರಾಧಿಕಾರವಾಗಿ ನೇಮಿಸಿದೆ. ಮೇಲ್ಮನವಿ ಪ್ರಾಧಿಕಾರದ ಸಂಪರ್ಕ ವಿಳಾಸವನ್ನು ಕೆಳಗೆ ನೀಡಲಾಗಿದೆ.

ಸದಸ್ಯ ಮತ್ತು ಕಾರ್ಯನಿರ್ವಾಹಕ ಅಧಿಕಾರಿ
' 57/17, "ಹಜ್ ಭವನ" ತಿರುಮೇನಹಳ್ಳಿ,
ಹೆಗಡೆ ನಗರ ಮುಖ್ಯ ರಸ್ತೆ, ಬೆಂಗಳೂರು – 560 064
ದೂರವಾಣಿ ಸಂಖ್ಯೆ: 080-28567673
ಇ-ಮೇಲ್: info@karhaj.in

1. **<u>ಸಮಿತಿಯ ಸಂಘಟನೆ, ಕಾರ್ಯಗಳು ಮತ್ತು ಕರ್ತವ್ಯಗಳು:</u>**

ಮುಸ್ಲಿಮರ ಹಜ್ ತೀರ್ಥಯಾತ್ರೆಗೆ ಸಂಬಂಧಿಸಿದ ವ್ಯವಸ್ಥೆಗಳನ್ನು ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಹಜ್ ಸಮಿತಿ ಕಾಯ್ದೆ 2002 ರ ಅಡಿಯಲ್ಲಿ ಕರ್ನಾಟಕ ರಾಜ್ಯ ಹಜ್ ಸಮಿತಿಯನ್ನು ರಚಿಸಲಾಗಿರುತ್ತದೆ.

ರಾಜ್ಯ ಹಜ್ ಸಮಿತಿಯ ಸದಸ್ಯರಾಗಿ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲು ಹಜ್ ಸಮಿತಿ ಕಾಯ್ದೆ 2002 ರ ಸೆಕ್ಷನ್ 18 (1) ರಲ್ಲಿ ಈ ಕೆಳಗಿನ ಅಂಶಗಳನ್ನು ನಿಗಧಿಪಡಿಸಿದೆ.

(i) ಮುಸ್ಲಿಂ ಸದಸ್ಯರಿಂದ ಈ ಕೆಳಕಂಡ 3 ಸದಸ್ಯರು;
- (ಅ) ಸಂಸತ್ತಿನಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿರುವವರು
- (ಆ) ರಾಜ್ಯ ವಿಧಾನ ಸಭೆಯ ಸದಸ್ಯರು
- (ಇ) ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು (ಅಸ್ತಿತ್ವದಿದ್ದಲ್ಲಿ)

(ii) ರಾಜ್ಯದ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವ ಮುಸ್ಲಿಂ ಸದಸ್ಯರಲ್ಲಿ 3 ಸದಸ್ಯರು

(iii) ಶಿಯಾ ಮುಸ್ಲಿಂ ಆಗಿರುವ ಒಬ್ಬರನ್ನು ಒಳಗೊಂಡಂತೆ ಮುಸ್ಲಿಂ ಧರ್ಮಶಾಸ್ತ್ರ ಮತ್ತು ಕಾನೂನಿನಲ್ಲಿ ಪರಿಣಿತಿಯನ್ನು ಹೊಂದಿರುವ 3 ಸದಸ್ಯರು

(iv) ಸಾರ್ವಜನಿಕ ಆಡಳಿತ, ಹಣಕಾಸು, ಶಿಕ್ಷಣ, ಸಂಸ್ಕೃತಿ ಅಥವಾ ಸಾಮಾಜಿಕ ಕಾರ್ಯಕ್ಷೇತ್ರಗಳ ಮುಸ್ಲಿಂ ಸೇವಾ ಸಂಸ್ಥೆಗಳನ್ನು ಪ್ರತಿನಿಧಿಸುವ 5 ಸದಸ್ಯರು.

(v) ರಾಜ್ಯ ವಕ್ಫ್ ಬೋರ್ಡ್ ಅಧ್ಯಕ್ಷರು

(vi) ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿ, ಅವರು ಸಮಿತಿಯ ಎಕ್ಸ್–ಅಫೀಸಿಯೊ ಸದಸ್ಯರಾಗಿರಬೇಕು.

<u>ಹೊಸ ಮಾದರಿಯಲ್ಲಿ ವರ್ಗಾವಾರು ಸದಸ್ಯರು:</u>

| ಖಟ ಓ೮. | **ಸದಸ್ಯರ ಹೆಸರು ಮತ್ತು ವಿಳಾಸ** | |
|---|---|---|
| 1 | ಶ್ರೀ ಸೈಯದ್ ನಾಸಿರ್ ಹುಸ್ಸೇನ್,<br>ಸಂಸತ್ತಿನ ಸದಸ್ಯರು<br>164, 2ನೇ ಅಡ್ಡ ರಸ್ತೆ,<br>ಎಕ್ಸ್–ಸರ್ವಿಸ್ ಮ್ಯಾನ್ ಕಾಲೋನಿ<br>ಸಿ ಬಿ, ಬಳ್ಳಾರಿ – 583102 | ಸದಸ್ಯರು |
| 2 | ಶ್ರೀಮತಿ ಕನೀಜ್ ಫಾತಿಮಾ,<br>ವಿಧಾನ ಸಭಾ ಸದಸ್ಯರು<br>ನಂ. 1–864/5, ಎಮ್.ಎಸ್.ಕೆ ಮಿಲ್ ರಸ್ತೆ,<br>ಸ್ಟೇಷನ್ ಬಜಾರ್, ಕಲಬುರ್ಗಿ | ಸದಸ್ಯರು |

| | | |
|---|---|---|
| 3 | ಶ್ರೀ ಬಿ.ಎಂ. ಫಾರೂಕ್<br>ವಿಧಾನ ಪರಿಷತ್ತಿನ ಸದಸ್ಯರು<br>8–112 (1), ಬ್ಲಾಕ್ ನಂ.8, ಕಾಟೀಪಲ್ಲ,<br>ಮಂಗಳೂರು, ದಕ್ಷಿಣ ಕನ್ನಡ – 575030 | ಸದಸ್ಯರು |
| 4 | ಶ್ರೀ ಎಮ್.ಡಿ. ನಯೀಮ್<br>ಬೆಲಕೂನಿ ಚೌಧರಿ ವಿಲೇಜ್, ಔರಾದ್ ತಾಲ್ಲೂಕು<br>ಬೀದರ್ ಜಿಲ್ಲೆ | ಸದಸ್ಯರು |
| 5 | ಡಾ. ಮೊಹಮ್ಮದ್ ಕಬೀರ್ ಅಹ್ಮದ್<br>ನಂ. 786, ಚಿಕ್ಕಬಣಾವರ್, ಹೆಸರಘಟ್ಟ ಮುಖ್ಯ ರಸ್ತೆ,<br>ಬೆಂಗಳೂರು – 90 | ಸದಸ್ಯರು |
| 6 | ಶ್ರೀಮತಿ ರುಕೀಯಾ ಬೇಗಂ<br>ಯಾದಗಿರಿ ಜಿಲ್ಲೆ | ಸದಸ್ಯರು |
| 7 | ಶ್ರೀ ಎ.ಬಿ. ಮೊಹಮ್ಮದ್ ಹನೀಫ್ ಅಸಾಯಿ<br>ಅಸಾಯಿ ಮಾಡಕ ಹೌಸ್, ಅಸಿಗೊಲೆ<br>ಮನ್‌ಜನಾಡಿ, ಮಂಗಳೂರು ತಾಲ್ಲೂಕು,<br>ದ. ಕ. ಜಿಲ್ಲೆ | ಸದಸ್ಯರು |
| 8 | ಶ್ರೀ ಮೌಲಾನ ಹಫೀಝ್ ಮೊಹಮ್ಮದ್ ರಫೀಕ್<br>ಖತೀಬ್–ಓ–ಇಮಾಮ್ , ಜಾಮಿಯಾ ಮಸೀದಿ,<br>ಅನ್‌ದ್ರೋನಿ ಖಿಲ್ಲಾ, ರಾಯಚೂರು | ಸದಸ್ಯರು |
| 9 | ಶ್ರೀ ಸೈಯದ್ ಮನ್‌ಜೂರ್ ರಝಾ,<br>ನಂ. 11, 2ನೇ ಮಹಡಿ, ಕರ್ಲಿ ರಸ್ತೆ,<br>ರಿಚ್ಮಂಡ್ ಟೌನ್, ಬೆಂಗಳೂರು | ಸದಸ್ಯರು |
| 10 | ಶ್ರೀ ಖುಸ್ರೂ ಖುರೇಷಿ,<br>ನಂ. 571, 8ನೇ ಬ್ಲಾಕ್, 1ನೇ ಮುಖ್ಯ ರಸ್ತೆ,<br>ಕೋರಮಂಗಲ, ಬೆಂಗಳೂರು | ಸದಸ್ಯರು |
| 11 | ಶ್ರೀ ರವೂಫುದ್ದೀನ್ ಕಚೇರಿವಾಲೆ,<br>ನಂ. 8–10–45/2, ರಂಗಮಂದಿರದ ಹತ್ತಿರ,<br>ಸ್ಟೇಡಿಯಂ ರಸ್ತೆ, ಬೀದರ್ | ಸದಸ್ಯರು |
| 12 | ಶ್ರೀ ರಹಮತ್ತುಲ್ಲಾ<br>ಗಗ್ರಿ ಶಿಕಾರಿಪುರ, ಶಿವಮೊಗ್ಗ | ಸದಸ್ಯರು |

| | | |
|---|---|---|
| 13 | ಶ್ರೀ ಚಾಂದ್ ಪಾಷಾ<br>ನಂ. 16, 2ನೇ ಅಡ್ಡ ರಸ್ತೆ,<br>ಎಕ್ಸ್–ಸರ್ವಿಸ್ ಮ್ಯಾನ್ ಕಾಲೋನಿ<br>ಆರ್.ಟಿ. ನಗರ, ಬೆಂಗಳೂರು | ಸದಸ್ಯರು |
| 14 | ಶ್ರೀ ಮೊಹಿದ್ದೀನ್ ಬಿನ್ ಸೈಯದ್ ಸಾಬ್‌ಜಾನ್,<br>ನಂ. 9, 1ನೇ ಅಡ್ಡ ರಸ್ತೆ, ಕೆಂಚಪ್ಪ ಗಾರ್ಡನ್,<br>ಚಾಮುಡ್ಡಿ ನಗರ, ಮುಖ್ಯ ರಸ್ತೆ,<br>ಬೆಂಗಳೂರು – 32. | ಸದಸ್ಯರು |
| 15 | ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಬೋರ್ಡ್ ಆಫ್ ಔಕಾಫ್<br>ಬೆಂಗಳೂರು | ಸದಸ್ಯರು |
| 16 | ಕಾರ್ಯನಿರ್ವಾಹಕ ಅಧಿಕಾರಿ,<br>ಕರ್ನಾಟಕ ರಾಜ್ಯ ಹಜ್ ಸಮಿತಿ,<br>ಬೆಂಗಳೂರು | ಕಾರ್ಯನಿರ್ವಾಹಕ ಅಧಿಕಾರಿ |

<u>ರಾಜ್ಯ ಹಜ್ ಸಮಿತಿಯ ಅವಧಿ</u>:

ರಾಜ್ಯ ಸಮಿತಿಯ ಸದಸ್ಯರ ಅಧಿಕಾರವಧಿ ಮೂರು ವರ್ಷಗಳು. ಪ್ರಸ್ತುತ ಸಮಿತಿಯನ್ನು 20–01–2020 ರಂದು ರಚಿಸಲಾಯಿತು. ದಿನಾಂಕ 07–07–2021ರ ಅಧಿಸೂಚನೆ ಸಂಖ್ಯೆ MWD 09 WHJ 2019 ರ ಅನ್ವಯ ಶ್ರೀ ರವೂಫುದ್ದೀನ್ ಕಚೇರಿವಾಲೆಯವರು ಕರ್ನಾಟಕ ರಾಜ್ಯ ಹಜ್ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಿರುತ್ತಾರೆ ಎಂದು ಘೋಷಿಸಲಾಗಿರುತ್ತದೆ.

**<u>ಕಾರ್ಯಗಳು ಮತ್ತು ಕರ್ತವ್ಯಗಳು</u>**:

ಸಮಿತಿಯ ಮುಖ್ಯಕಾರ್ಯಗಳು ಹೀಗಿವೆ:

i) ಅರ್ಜಿದಾರರ ಅರ್ಜಿಗಳನ್ನು ಸ್ವೀಕರಿಸುವುದು, ಅರ್ಜಿಗಳನ್ನು ಪರಿಶೀಲನೆ ಮಾಡುವುದು, ದಾಖಲೆಗಳನ್ನು ಸ್ಕ್ಯಾನ್ ಮಾಡುವುದು, ಮುಂಬೈನ ಭಾರತೀಯ ಹಜ್ ಸಮಿತಿಯ ಸರ್ವರ್‌ನಲ್ಲಿ ಅಪ್ ಲೋಡ್ ಮಾಡುವುದು ಮತ್ತು ರಾಜ್ಯದಿಂದ ಹಜ್ ಯಾತ್ರೆಗೆ ಲಾಟರಿ ಮೂಲಕ (ಅಗತ್ಯವಿದ್ದರೆ) ಆಯ್ಕೆ ಮಾಡುವುದು.

ii) ಆಯ್ಕೆಯಾದ ಹಜ್ ಯಾತ್ರಿಕರಿಂದ ಅಂತರರಾಷ್ಟ್ರೀಯ ಪಾಸ್‌ಪೋರ್ಟ್‌ಗಳನ್ನು, ವೈದ್ಯಕೀಯ ಪ್ರಮಾಣ ಪತ್ರ ಮತ್ತು ಇನ್ನಿತರೆ ಅಗತ್ಯ ದಾಖಲೆಗಳನ್ನು ಸಂಗ್ರಹ ಮಾಡಿ, ಮುಂಬೈನ ಭಾರತೀಯ ಹಜ್ ಸಮಿತಿಯ ಕಚೇರಿಗೆ ವರ್ಗಾಯಿಸುವುದು.

iii) ಪ್ರತಿ ವರ್ಷ ಹಜ್ ಯಾತ್ರಿಕರು ಉಳಿದುಕೊಳ್ಳಲು ಸೂಕ್ತ ಕಟ್ಟಡಗಳನ್ನು ಆಯ್ಕೆ ಮಾಡಲು ಜೆಡ್ಡಾನಲ್ಲಿನ ಭಾರತೀಯ ಕೌನ್ಸುಲೇಟ್ ಜನರಲ್ ರವರಿಗೆ ಸಹಾಯ ಮಾಡಲು ಕಟ್ಟಡ ಆಯ್ಕೆ ತಂಡದಲ್ಲಿ ಪ್ರತಿನಿಧಿಯ ಡೆಪ್ಯುಟೇಶನ್ ಮಾಡುವುದು.

iv) ಸೌದಿ ಅರೇಬಿಯಾದಲ್ಲಿ ಕರ್ನಾಟಕ ರಾಜ್ಯದಿಂದ ಬಂದ ಹಜ್ ಯಾತ್ರಿಕರ ಕಲ್ಯಾಣವನ್ನು ನೋಡಿಕೊಳ್ಳಲು ಹಜ್ ಸ್ವಯಂಸೇವಕರ (ಖಾದಿಮುಲ್ ಹುಜ್ಜಾಜ್) ಡೆಪ್ಯುಟೇಶನ್ ಮಾಡುವುದು.

v) ಮುಂಬೈನ ಭಾರತೀಯ ಹಜ್ ಸಮಿತಿಯಿಂದ ಸ್ವೀಕೃತವಾಗುವ ಕನ್ನಡ, ಇಂಗ್ಲೀಷ್ ಮತ್ತು ಉರ್ದು ಭಾಷೆಗಳಲ್ಲಿ ಹಜ್ ಗೈಡ್ ಪುಸ್ತಕಗಳನ್ನು ಪ್ರತಿ ವರ್ಷ ಆಯ್ಕೆಯಾದ ಹಜ್ ಯಾತ್ರಿಕರಿಗೆ ಉಚಿತವಾಗಿ ಸರಬರಾಜು ಮಾಡುವುದು. ಉರ್ದು ಮತ್ತು ಇಂಗ್ಲೀಷ್ ಭಾಷೆಯಲ್ಲಿರುವ 'ಹಜ್ ಮತ್ತು ಉಮ್ರಾ' ಕುರಿತ ಕೈ ಪುಸ್ತಕವನ್ನು ಉಚಿತವಾಗಿ ಸರಬರಾಜು ಮಾಡುವುದು.

vi) ಹಜ್ ವಿಮಾನ ಕಾರ್ಯಾಚಾರಣೆ ಇತ್ಯಾದಿಗಳ ಯಶಸ್ವಿ ವ್ಯವಸ್ಥೆಗಾಗಿ, ಭಾರತ ಸರ್ಕಾರ, ರಾಜ್ಯ ಸರ್ಕಾರ, ಮುಂಬೈನ ಭಾರತೀಯ ಹಜ್ ಸಮಿತಿ ಮತ್ತು ಇನ್ನಿತರೇ ಸಂಸ್ಥೆಗಳಾದ ಸೌದಿ ಅರೇಬಿಯನ್ ಏರ್ಲೈನ್ಸ್ / ಏರ್ ಇಂಡಿಯಾ, ಏರ್ಪೋರ್ಟ್ ಅಥಾರಟಿ ಆಫ್ ಇಂಡಿಯಾ, ಇಮ್ಮಿಗ್ರೇಷನ್, ಕಸ್ಟಮ್ಸ್, ಮತ್ತು ಇತರೇ ಸ್ವಯಂಸೇವಾ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು.

vii) ಬೆಂಗಳೂರಿನಿಂದ ಜೆಡ್ಡಾ / ಮದೀನಾಕ್ಕೆ ನೇರ ಹಜ್ ವಿಮಾನಗಳಲ್ಲಿ ಪ್ರಯಾಣಿಸುವ ಯಾತ್ರಿಕರ ನಿರ್ಗಮನ ಹಾಗೂ ಆಗಮನದ ಸಮಯಗಳಲ್ಲಿ ವಸತಿ, ಸಾರಿಗೆ ಇತ್ಯಾದಿಗಳಿಗೆ ಸಹಾಯಕ ವ್ಯವಸ್ಥೆಗಳನ್ನು ಮಾಡುವುದು.

viii) ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಆಯ್ಕೆಯಾದ ಯಾತ್ರಿಕರಿಗಾಗಿ ಮೆನಂನ್‌ಜೈಟಿಸ್ ಚುಚ್ಚುಮದ್ದು ಹಾಗೂ ಹಜ್ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.

## 2. **ಅಧಿಕಾರಿಗಳು ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು**

ಹಜ್ ಸಮಿತಿಯ ಅಧ್ಯಕ್ಷರು ಈ ಸಮಿತಿಯ ಮುಖ್ಯಸ್ಥರಾಗಿದ್ದು, ಹಿರಿಯ ಕೆ.ಎ.ಎಸ್ ದರ್ಜೆಯ ಅಧಿಕಾರಿಯವರು ಸಮಿತಿಯ ಸದಸ್ಯ ಮತ್ತು ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು ದಿನನಿತ್ಯದ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಸದಸ್ಯ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ರಾಜ್ಯ ಹಜ್ ಸಮಿತಿಗೆ ಸಂಬಂಧಿಸಿದ ನೀತಿ ಮತ್ತು ಆಡಳಿತದ ಎಲ್ಲಾ ವಿಷಯಗಳ ಬಗ್ಗೆ ಸಮಿತಿಯ ಆಡಳಿತ ಮುಖ್ಯಸ್ಥರು ಮತ್ತು ಅಧ್ಯಕ್ಷರ ಹಾಗೂ ಸಮಿತಿಯ ಸಲಹೆಗಾರರಾಗಿದ್ದು, ಅವರಿಗೆ ರಾಜ್ಯ ಹಜ್ ಸಮಿತಿಯ ಸಿಬ್ಬಂದಿ ಸಹಾಯ ಮಾಡುತ್ತಾರೆ.

ಕಚೇರಿಯ ವ್ಯವಹಾರವನ್ನು ನಡೆಸುವಲ್ಲಿ ಮತ್ತು ಶಿಸ್ತಿನ ನಿರ್ವಹಣೆಗೆ ಸಂಬಂಧಿಸಿದಂತೆ, ಕಚೇರಿ 5 ವಿಭಾಗಗಳನ್ನು ಹೊಂದಿದೆ ಮತ್ತು ಈ ವಿಭಾಗಗಳ ಕಾರ್ಯಚಟುವಟಿಕಯನ್ನು ಕೆಳಗೆ ಪಟ್ಟಿ ಮಾಡಲಾಗಿದೆ:–

| **S.No** | **ವಿಭಾಗಗಳು** | ವ್ಯವಹರಿಸುವ ವಿಷಯಗಳ ವಿವರಗಳು |
|---|---|---|
| 1 | ವಿಭಾಗ –ಎ | 1. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಸ್ವೀಕೃತಿ ಮತ್ತು ತುರ್ತು ಪತ್ರಗಳು<br>2. ಸಮಿತಿಯ ವಾರ್ಷಿಕ ವರದಿ<br>3. ಸಮಿತಿಯ ಸದಸ್ಯರ ಟಿ.ಎ. ಬಿಲ್ಲುಗಳ ವ್ಯವಸ್ಥೆ ಮಾಡುವುದು<br>4. ಬ್ಯಾಂಕ್ ವ್ಯವಹಾರ ಮತ್ತು ಆಡಿಟ್ ಕೆಲಸ<br>5. ಸಮಿತಿಗೆ ಸಂಬಂಧಿಸಿದ ಕಾನೂನು ವಿಷಯಗಳು<br>6. ಬ್ಯಾಂಕ್ ಹೇಳಿಕೆಯೊಂದಿಗೆ ವರದಿಗಳ ಸಾಮರಸ್ಯ<br>7. ಲೇಖನ ಸಾಮಗ್ರಿಗಳ ಖರೀದಿ |

| | | |
|---|---|---|
| 2 | ವಿಭಾಗ – ಬಿ | 1. ಹಜ್ ಬಗ್ಗೆ ಪ್ರಕಟನೆ ಮತ್ತು ಅರ್ಜಿಗಳನ್ನು ಅಹ್ವಾನಿಸುವುದು<br>2. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಪ್ರಶ್ನೆಗಳು ಹಾಗೂ ಅಧಿವೇಶನ.<br>3. ಹಜ್ ಸ್ವಯಂ ಸೇವಕರು (ಖಾದಿಮುಲ್ ಹುಜ್ಜಾಜ್) ಮತ್ತು ಉನ್ನತ ಮಟ್ಟದ ಅಧಿಕಾರಿಗಳು<br>4. ಕಟ್ಟಡಗಳ ಆಯ್ಕೆ ತಂಡದ ಸದಸ್ಯರನ್ನು ನಿಯೋಜಿಸುವುದು<br>5. ವೈದ್ಯಕೀಯ ಮಿಷನ್‌ನ ಆಯ್ಕೆ ಮತ್ತು ಡೆಪ್ಯುಟೇಶನ್.<br>6. ಮೆನಂನ್‌ಜೈಟಿಸ್ ಚುಚ್ಚುಮದ್ದು ಕಾರ್ಯಕ್ರಮಗಳ ಆಯೋಜನೆ ಮತ್ತು ಆರೋಗ್ಯ ಕಾರ್ಡ್‌ಗಳ ತಯಾರಿಕೆ<br>7. ಯಾತ್ರಿಕರ ಪ್ರಯಾಣದ ಕ್ಯಾನ್ಸಲೇಷನ್ ಕುರಿತು<br>8. ಮುಂಬೈನ ಭಾರತೀಯ ಹಜ್ ಸಮಿತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು<br>9. ಮ್ಯಾನಿಫೆಸ್ಟ್‌ನಲ್ಲಿ ಯಾತ್ರಿಕರ ಸೇರ್ಪಡೆ ಅಥವಾ ಅಳಿಸುವಿಕೆ |
| 3 | ವಿಭಾಗ – ಸಿ | 1. ಹಜ್ ಸಮಿತಿಯ ಸಭೆಗಳು<br>2. ಹಜ್ ಗಾಗಿ ಅರ್ಜಿಗಳ ರವಾನೆ ಮತ್ತು ಸ್ವೀಕೃತಿ<br>3. ಯಾತ್ರಿಕರಿಗೆ ವಿವಿಧ ಸುತ್ತೋಲೆಗಳನ್ನು ರವಾನಿಸುವುದು<br>4. ಸಂಬಳ ಮತ್ತು ಇತರೇ ಪಾವತಿಗಳು<br>5. ಮಾರ್ಗದರ್ಶಿ ಪುಸ್ತಕಗಳಿಗೆ ಅನುವಾದ ಕೆಲಸ<br>6. ಹಜ್ ಗೈಡ್, ಹಜ್ ಮತ್ತು ಉಮ್ರಾದ ಪುಸ್ತಕಗಳ ಮುದ್ರಣ<br>7. ಸ್ಟಾಕ್ ಫೈಲ್‌ಗಳು ಮತ್ತು ರೆಜಿಸ್ಟರ್‌ಗಳ ನಿರ್ವಹಣೆ<br>8. ಪ್ರಯಾಣ ದಾಖಲೆಗಳ ಸಿದ್ಧತೆಗಳು |
| 4 | ವಿಭಾಗ – ಡಿ | 1. ಹಜ್ ಸಮಿತಿಯ ರಚನೆ<br>2. ಸೇವಾ ಪುಸ್ತಕಗಳ ನಮೂದುಗಳು<br>3. ಆಯ್ಕೆಯಾದ ಯಾತ್ರಿಕರಿಗೆ ತರಬೇತಿ ಶಿಬಿರಗಳ ಆಯೋಜನೆ.<br>4. ಸ್ವೀಕೃತವಾದ ಹಜ್‌ನ ಅರ್ಜಿಗಳ ನೊಂದಾವಣಿ<br>5. ಸ್ವೀಕೃತವಾದ ಹಜ್ ಅರ್ಜಿಗಳ ಪರಿಶೀಲನೆ,<br>6. ಖುರ್ರಾ ಕೆಲಸ<br>7. ಆಯ್ಕೆಯಾದ ಯಾತ್ರಿಕರ ಪಟ್ಟಿಯನ್ನು ಹೋಲಿಸುವುದು<br>8. ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯಗಳು<br>9. ವಿಮಾನ ಟಿಕೆಟುಗಳ ಮುಂದೂಡಿಕೆ ಅಥವಾ ಮುಂಗಡ |
| 5 | ವಿಭಾಗ – ಇ | 1. ಸ್ವಾಗತಾ ಕೌಂಟರ್,<br>2. ಹಜ್ ಅರ್ಜಿ ನಮೂನೆಗಳು, ಹಜ್ ಸ್ವಯಂಸೇವಕರ ನಮೂನೆಗಳು, ಇತ್ಯಾದಿಗಳ ವಿತರಣೆ ಮತ್ತು ಸ್ವೀಕೃತಿ<br>3. ಟಪ್ಪಾಲ್ ಸ್ವೀಕೃತಿ ಮತ್ತು ದಿನಾಂಕದ ಮುದ್ರೆಯನ್ನು ಅಂಟಿಸುವುದು<br>4. ಸಾರ್ವಜನಿಕರು / ಯಾತ್ರಿಕರೊಂದಿಗೆ ಮಾತುಕತೆ<br>5. ಫೋನ್ ಕರೆಗಳಿಗೆ ಉತ್ತರಿಸುವುದು<br>6. ಯಾತ್ರಿಕರಿಗೆ ಹಜ್ ಗೈಡ್ ರವಾನೆ. |

ಸಮಿತಿಯ ಸದಸ್ಯ ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರು, ನವ ದೆಹಲಿಯಲ್ಲಿರುವ ಭಾರತ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ (ಹಜ್ ಶಾಖೆ), ಮುಂಬೈನ ಭಾರತೀಯ ಹಜ್ ಸಮಿತಿ ಹಾಗೂ ಹಜ್ ತೀರ್ಥಯಾತ್ರೆಗೆ ಸಂಬಂಧಿಸಿದ ರಾಜ್ಯ ಸರ್ಕಾರದ ನೀತಿ ನಿರ್ಧಾರಗಳನ್ನು ಕಾರ್ಯಗತಗೊಳಿಸುತ್ತಾರೆ. ಎಲ್ಲಾ ಇತರ ನೌಕರರು ಇವರ ಅಧೀನದಲ್ಲಿದ್ದು, ಕಾರ್ಯನಿರ್ವಾಹಕ ಅಧಿಕಾರಿಯವರು ವಹಿಸಿಕೊಡುವ ಕೆಲಸವನ್ನು ನಿರ್ವಹಿಸುತ್ತಾರೆ.

2022ನೇ ಪವಿತ್ರ ಹಜ್‌ನ ವಿಧಿ ವಿಧಾನಗಳು 2022ರ ಜುಲೈ 2ನೇ ವಾರದಲ್ಲಿ ಸೌಧಿ ಅರೇಬಿಯಾದ ಮಕ್ಕಾ ಪಟ್ಟಣದ ಸಮೀಪದಲ್ಲಿ ಆಚರಣೆಯಾಗಿರುತ್ತದೆ.

ರಾಜ್ಯದ 3085 ಯಾತ್ರಿಕರು ಹಜ್ – 2022 ಯಾತ್ರೆಗಾಗಿ ಬೆಂಗಳೂರಿನ ಎಂಬಾರ್‌ಕೇಶನ್‌ನಿಂದ ಮಾತ್ರ ಪ್ರಯಾಣ ಮಾಡಿರುತ್ತಾರೆ.

## 3. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗ ಒಳಗೊಂಡಂತೆ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ವಿಧಾನ:

ಹಜ್ ಮತ್ತು ಸಂಬಂಧಿತ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಪ್ರಮುಖ ವಿಷಯಗಳನ್ನು ನಿರ್ಧಾರ ಮತ್ತು ಅನುಮೋದನೆಗಾಗಿ ಸಮಿತಿಯ ಮುಂದೆ ಇಡಲಾಗುತ್ತದೆ. ಭಾರತೀಯ ಹಜ್ ಸಮಿತಿ ಮತ್ತು ರಾಜ್ಯ ಸರ್ಕಾರದ ಎಲ್ಲಾ ಮಾರ್ಗಸೂಚಿಗಳಿಗೆ ಒಳಪಟ್ಟು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯು ಸಮಿತಿಯ ಏಕೈಕ ಅಧಿಕಾರವಾಗಿರುತ್ತದೆ, ಈ ಸಮಿತಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸ್ವೀಕೃತವಾದ ಮನವಿಗಳಿಗೆ ತ್ವರಿತವಾಗಿ ಉತ್ತರವನ್ನು ನೀಡಲಾಗುತ್ತದೆ, ಮನವಿಗಳು ನೀತಿ ವಿಷಯಗಳಿಗೆ ಸಂಬಂಧಪಟ್ಟಿದ್ದರೆ, ಮುಂಬೈನ ಭಾರತೀಯ ಹಜ್ ಸಮಿತಿಯಿಂದ ಉತ್ತರ ಪಡೆದು, ಸ್ವೀಕರಿಸಿದ ಪ್ರತ್ಯುತ್ತರಗಳನ್ನು ಅರ್ಜಿದಾರರಿಗೆ ತಿಳಿಸಲಾಗುತ್ತದೆ. ಪ್ರಮುಖ ವಿಷಯಗಳ ಸಂದರ್ಭದಲ್ಲಿ, ಸ್ವೀಕೃತವಾದ ಮನವಿಗಳನ್ನು ಸಮಿತಿಯ ಮುಂದೆ ಇಡಲಾಗುತ್ತದೆ ಮತ್ತು ನಿರ್ಧಾರಗಳನ್ನು ಅರ್ಜಿದಾರರಿಗೆ ತಿಳಿಸಲಾಗುತ್ತದೆ,

## 4. ಪ್ರಕಾರ್ಯಗಳ ನಿರ್ವಹಣೆಗೆ ಅಳವಡಿಸಿಕೊಂಡಿರುವ ಸೂತ್ರಗಳು.

ಪ್ರತಿ ವರ್ಷ ಹಜ್ ಯಾತ್ರೆಗೆ ವ್ಯವಸ್ಥೆ ಮಾಡುವುದು ಸಮಿತಿಯ ಮುಖ್ಯ ಕಾರ್ಯವಾಗಿರುತ್ತದೆ. ಇದು ಕಾಲೋಜಿತ. ವರ್ಷವಿಡೀ ಕಾರ್ಯನಿರ್ವಹಿಸದ ಕಾರಣ ಕಾರ್ಯವನ್ನು ನಿರ್ವಹಿಸಲು ಯಾವುದೇ ನಿರ್ದಿಷ್ಟ ಮಾನದಂಡಗಳಿಲ್ಲ. ಹಜ್‌ನ ಸೀಸನ್‌ನಲ್ಲಿ ಹಜ್ ಸಮಿತಿಯು ಹೊರಗುತ್ತಿಗೆ ಸಿಬ್ಬಂದಿ ಮತ್ತು ಸ್ವಯಂ ಸೇವಕರನ್ನು ವಿವಿಧ ವ್ಯವಸ್ಥೆಗಳಲ್ಲಿ ಸಹಾಯ ಮಾಡಲು ತೊಡಗಿಸುತ್ತದೆ. ದಿನನಿತ್ಯದ ಪತ್ರವ್ಯವಹಾರವು ಭಾರವಿಲ್ಲದ ಕಾರಣ ಫೈಲ್‌ಗಳನ್ನು ಒಂದೇ ಫೈಲ್ ಸಿಸ್ಟಮ್‌ನಲ್ಲಿ ನಿರ್ವಹಿಸಲಾಗುತ್ತದೆ.

## 5. ಕಾರ್ಯಗಳನ್ನು ನಿರ್ವಹಿಸಲು ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಹಾಗೂ ದಾಖಲೆಗಳು

ಈ ಸಮಿತಿಯಲ್ಲಿನ ವ್ಯವಹಾರವನ್ನು ಹಜ್ ಸಮಿತಿ ಕಾಯ್ದೆ 2002ರಲ್ಲಿ ಒಳಗೊಂಡಿರುವ ನಿಬಂಧನೆಗಳು ಹಾಗೂ ಸಮಿತಿಯ ಕಾರ್ಯಚಟುವಟಿಕೆಗಳಿಗೆ ಅನ್ವಯವಾಗುವ ಸರ್ಕಾರದ ಇತರ ನಿಯಮಗಳನ್ನು ಉಲ್ಲೇಖಿಸಿ ನಡೆಸಲಾಗುತ್ತದೆ. ಸಮಿತಿಯ ಕಾರ್ಯವು ಕಾಲೋಚಿತ ಸ್ವರೂಪದಾಗಿದ್ದು, ಭಾರತೀಯ ಹಜ್ ಸಮಿತಿ ಮತ್ತು ರಾಜ್ಯ ಸರ್ಕಾರದ ಒಟ್ಟಾರೆ ಮಾರ್ಗದರ್ಶನಕ್ಕೆ ಒಳಪಟ್ಟಿರುತ್ತದೆ.

## 6. ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿ

| ಕ್ರ.ಸಂಖ್ಯೆ | ದಾಖಲೆಗಳ ವರ್ಗ | ದಾಖಲೆಗಳ ಹೆಸರು ಮತ್ತು ಒಂದೇ ಸಾಲಿನಲ್ಲಿ ಅದರ ಪರಿಚಯ | ದಾಖಲೆಗಳನ್ನು ಪಡೆಯುವ ವಿಧಾನ | ಪಡೆದ ದಾಕಲೆಗಳ ನಿಯಂತ್ರಣ |
|---|---|---|---|---|

| | | | | |
|---|---|---|---|---|
| 1. | ಹಜ್ ಯಾತ್ರೆಯ ಅರ್ಜಿಗಳು | ಹಜ್ ಯಾತ್ರೆಗೆ ಅರ್ಜಿ ಸಲ್ಲಿಸಲು ಸೂಚನೆಗಳನ್ನು ಒಳಗೊಂಡಿರುತ್ತದೆ | ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕು | ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು |
| 2. | ಹಜ್ ಸ್ವಯಂ ಸೇವಕರ ಅರ್ಜಿಗಳು | ಹಜ್ ಸ್ವಯಂಸೇವಕರಿಗೆ (ಖಾದಿಮುಲ್ ಹುಜ್ಜಾಜ್) ಅರ್ಜಿ ಸಲ್ಲಿಸಲು ಸೂಚನೆಗಳು | - ಅದೇ- | - ಅದೇ- |
| 3. | ಹಜ್‌ನ ತರಭೇತುಗಾರರ ಅರ್ಜಿಗಳು | ಭಾರತೀಯ ಹಜ್ ಸಮಿತಿಯ ವತಿಯಿಂದ ನೀಡಲಾಗುವ ತರಬೇತಿಗಾಗಿ ಹಜ್‌ನ ತರಬೇತುಗಾರರು ಅರ್ಜಿ ಸಲ್ಲಿಸಲು ಸೂಚನೆಗಳು | ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕು | ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು |

## 7. ಕಾರ್ಯ ನೀತಿಯನ್ನು ರೂಪಿಸಲು ಅಥವಾ ಅನುಷ್ಠಾನಗೊಳಿಸುವ ಬಗ್ಗೆ ಜನ ಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯಕ್ಕೆ ಇರುವ ವ್ಯವಸ್ಥೆಗಳ ವಿವರಗಳು:

ಸಾರ್ವಜನಿಕರು ಹಜ್ ಯಾತ್ರೆಗೆ ಸಂಬಂಧಿಸಿದ ಮಾರ್ಗದರ್ಶನ ಅಥವಾ ಸ್ಪಷ್ಟೀಕರಣಗಳನ್ನು ಕೋರಿ ಸಮಿತಿಯನ್ನು ಸಂಪರ್ಕಿಸಿದಾಗ, ಸಮಿತಿಯು ಅಂತಹ ವಿನಂತಿಗಳಿಗೆ ಉತ್ತರಗಳನ್ನು ಕಳುಹಿಸುತ್ತದೆ. ಅದ್ದರಿಂದ ಸಾರ್ವಜನಿಕ ಸದಸ್ಯರೊಂದಿಗೆ ಸಮಾಲೋಚಿಸಲು ಯಾವುದೇ ನಿರ್ದಿಷ್ಟ ವ್ಯವಸ್ಥೆ ಅಸ್ತಿತ್ವದಲ್ಲಿಲ್ಲ. ಸಮಿತಿಯ ಸದಸ್ಯರು ಸಾರ್ವಜನಿಕರ ಕುಂದುಕೊರತೆಗಳನ್ನು ವ್ಯಕ್ತಪಡಿಸುತ್ತಾರೆ.

## 8. ಸಲಹೆಯನ್ನು ಪಡೆಯುವ ಸಂಬಂಧದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಇರುವಂತೆ ರಚಿಸಿರುವ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಸಂಸ್ಥೆಗಳು ಮತ್ತು ಇವುಗಳು ನಡೆಸುವ ಸಭೆಗಳು ಸಾರ್ವಜನಿಕರಿಗೆ ಮುಕ್ತವೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವುದೆ.

ಸಮಿತಿಯು ಕೆಲವೊಮ್ಮೆ ಕರ್ನಾಟಕ ರಾಜ್ಯ ಹಜ್ ಸಮಿತಿಯ ಅವಶ್ಯಕತೆಗಳಿಗೆ ಅನುಗುಣವಾಗಿ ಕೆಳಗಿನ ಉಪಸಮಿತಿಗಳನ್ನು ರಚಿಸುತ್ತದೆ.

1. ಆಯ್ಕೆಯಾದ ಯಾತ್ರಿಕರಿಗಾಗಿ ತರಬೇತಿ ನಡೆಸಲು ಉಪ ಸಮಿತಿ
2. ಊಟದ ವ್ಯವಸ್ಥೆಗಾಗಿ ಉಪ ಸಮಿತಿ

## 9. ಅಧಿಕಾರಿಗಳು ಮತ್ತು ನೌಕರರ ಡೈರೆಕ್ಟರಿ:

ಅಧಿಕಾರಿಗಳು ಮತ್ತು ನೌಕರರ ಡೈರೆಕ್ಟರಿ ಹೀಗಿದೆ:
ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿ:
ದೂರವಾಣಿ : 080-28567673 ಮತ್ತು ಈಮೇಲ್: info@karhaj.in

**10.ನಿಯಮಾವಳಿಗಳಲ್ಲಿ ಒದಗಿಸಿರುವಂತೆ ಪರಿಹಾರದ ವ್ಯವಸ್ಥೆಯನ್ನು ಒಳಗೊಂಡಂತೆ ಪ್ರತಿಯೊಬ್ಬ ಅಧಿಕಾರಿಗಳು ಮತ್ತು ನೌಕರರು ಪಡೆಯುವ ಮಾಸಿಕ ಸಂಭಾವನೆ.**

ಸಮಿತಿಯ ಸಿಬ್ಬಂದಿಗೆ ಕಾಲಕಾಲಕ್ಕೆ ವೇತನದ ಮಾಪಕಗಳನ್ನು ಸಮಿತಿ ಅನುಮೋದಿಸುತ್ತದೆ. ಕಾರ್ಯನಿರ್ವಾಹಕ ಅಧಿಕಾರಿ ರಾಜ್ಯ ನಾಗರೀಕ ಸೇವೆಗಳಿಂದ ಡೆಪ್ಯುಟೇಷನ್ ಹುದ್ದೆಯನ್ನು ಹೊಂದಿದ್ದಾರೆ. ಇತರೇ ಸಿಬ್ಬಂದಿಯ ಸಂಬಳವಾನ್ನು ಸರ್ಕಾರದಿಂದ ಪಡೆಯಲಾಗುತ್ತದೆ. ಸಿಬ್ಬಂದಿಯ ಸಂಬಳವನ್ನು ಸರ್ಕಾರವು ಅನುಮೋದಿಸಿದ ಆಡಳಿತಾತ್ಮಕ ಅನುದಾನದಿಂದ ಅನುದಾನದಿಂದ ಭರಿಸಲಾಗುತ್ತದೆ.

| | **ಹುದ್ದೆ** | **ಸಂಬಳ** | **ಇರುವ ಹುದ್ದೆಗಳು** |
|---|---|---|---|
| 1 | ಸದಸ್ಯರು ಮತ್ತು ಕಾರ್ಯನಿವಾಹಕ ಅಧಿಕಾರಿ | ಸಮವರ್ತಿ ಪ್ರಭಾರದಲ್ಲಿ | 1 |
| 2 | ನೋಡಲ್ ಅಧಿಕಾರಿ | ಗೌರವ ಆಧಾರದ ಮೇಲೆ | 1 |
| 3 | ಕಿರಿಯ ಸಹಾಯಕರು | (ರೂ.27650–52650) + ಇತರ ಭತ್ಯಗಳು | 3 |
| 4 | ಚಾಲಕ | (ರೂ. 21400–42000) + ಇತರ ಭತ್ಯಗಳು | 1 |
| 5 | ದಲಾಯತ್ | (ರೂ.19950–37900) + ಇತರ ಭತ್ಯಗಳು | 2 |
| 6 | ಡಿ.ಇ.ಓ | ಹೊರಗುತ್ತಿಗೆ ಅಧಾರದ ಮೇಲೆ ಸೀಸನಲ್ ಸಿಬ್ಬಂದಿ | 3 |
| 7 | ವಾಹನ ಚಾಲಕರು | ಹೊರಗುತ್ತಿಗೆ ಅಧಾರದ ಮೇಲೆ ಸೀಸನಲ್ ಸಿಬ್ಬಂದಿ | 3 |
| 8 | ಪಿಯೋನ್ / ರಿಸಪ್ಷನಿಸ್ಟ್ | ಹೊರಗುತ್ತಿಗೆ ಅಧಾರದ ಮೇಲೆ ಸೀಸನಲ್ ಸಿಬ್ಬಂದಿ | 3 |
| 9 | ಸ್ವಿಪರ್ / ಅಟೆಂಡೆಂಟ್ | ಹೊರಗುತ್ತಿಗೆ ಅಧಾರದ ಮೇಲೆ ಸೀಸನಲ್ ಸಿಬ್ಬಂದಿ | 1 |

**11.ಯೋಜನೆಗಳ ವಿವರಗಳು, ಪ್ರಸ್ತಾವಿಕ ವೆಚ್ಚಗಳು ಮತ್ತು ಬಟವಾಡೆ ಮಾಡಿದ ವರದಿಗಳನ್ನೊಳಗೊಂಡಂತೆ ಪ್ರತಿ ಏಜೆನ್ಸಿಗೂ ಹಂಚಿಕೆ ಮಾಡಿದ ಆಯವ್ಯಯ:**

ಆಡಳಿತಾತ್ಮಕ ಅನುದಾನ:

ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಹಜ್ ಸಮಿತಿಯ ಆಡಳಿತಾತ್ಮಕ ವೆಚ್ಚವನ್ನು ಪೂರೈಸಲು ವಾರ್ಷಿಕವಾಗಿ ಆಡಳಿತಾತ್ಮಕ ಅನುದಾನವನ್ನು ನೀಡುತ್ತದೆ. ಇದರಲ್ಲಿ ಕಚೇರಿ ನಿರ್ವಹಣೆ ಸೇರಿದಂತೆ, ಸಿಬ್ಬಂದಿಗೆ ಸಂಬಳ, ಸದಸ್ಯರಿಗೆ ಟಿಎ ಡಿಎ, ವಿದ್ಯುತ್ ಬಿಲ್ಲುಗಳು, ಟೆಲಿಫೋನ್ ಬಿಲ್ಲುಗಳು, ನೀರಿನ ಬಿಲ್ಲುಗಳು, ಕಚೇರಿಯ ಸಲಕರಣೆಗಳ ನಿರ್ವಹಣೆ, ಇತ್ಯಾದಿ ಹಾಗೂ ಹಜ್ ಕ್ಯಾಂಪ್‌ಗಳನ್ನು ಅಯೋಜನೆಯನ್ನು ಮಾಡಬೇಕಾಗಿರುತ್ತದೆ, 2022–23 ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರಾಜ್ಯ ಹಜ್ ಸಮಿತಿಗೆ ಆಡಳಿತಾತ್ಮಕ ಅನುದಾನವಾಗಿ ರೂ.354.00 ಲಕ್ಷಗಳನ್ನು ನೀಡಿರುತ್ತದೆ.

ಬೆಂಗಳೂರಿನಲ್ಲಿ ಹಜ್ ಭವನ

ರಾಜ್ಯ ಸರ್ಕಾರವು ಹಜ್ ಯಾತ್ರಿಕರಿಗೆ ಹೆಚ್ಚು ಸೌಲಭ್ಯಗಳನ್ನು ನೀಡಲು ಅನುವಾಗುವಂತೆ, ಬೆಂಗಳೂರಿನ ಯಲಹಂಕ ಹೋಬಳಿಯ ತಿರುಮೇನಹಳ್ಳಿಯಲ್ಲಿ ಹಜ್ ಭವನವನ್ನು ನಿರ್ಮಾಣ ಮಾಡಿದ್ದು, 2022–23ನೇ

ಸಾಲಿನಲ್ಲಿ ಹಜ್ ಭವನದ ನಿರ್ವಹಣೆಗಾಗಿ ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ರಾಜ್ಯ ಹಜ್ ಸಮಿತಿಯು 2016ನೇ ಸಾಲಿನಿಂದ ಈ ಹಜ್ ಭವನದಲ್ಲಿ ಹಜ್ ಕ್ಯಾಂಪ್‌ನ ಆಯೋಜನೆ ಮಾಡುತ್ತಿದ್ದು, ಇಲ್ಲಿ ತಮ್ಮ ನಿಜವಾದ ನಿರ್ಗಮನದ ಎರಡು ದಿನಗಳ ಮೊದಲು ಆಗಮಿಸುವ ಯಾತ್ರಿಕರಿಗೆ ಬೋರ್ಡಿಂಗ್ ಮತ್ತು ಸೌಲಭ್ಯಗಳನ್ನು ಹಾಗೂ ಇನ್ನಿತರೇ ಎಲ್ಲಾ ಸೌಕರ್ಯಗಳನ್ನು ಮಾಡಿಕೊಡಲಾಗುವುದು. ಹಾಗೆಯೇ ಮಂಗಳೂರಿನಿಂದ ಹಜ್ ಯಾತ್ರೆಗೆ ತೆರಳುವ ಯಾತ್ರಾರ್ಥಿಗಳಿಗೆ ಮಂಗಳೂರಿನಲ್ಲಿ ಹಜ್ ಕ್ಯಾಂಪ್ ಕೂಡ ನಡೆಸಲಾಗುತ್ತದೆ.

ಹಜ್ ಸ್ವಯಂಸೇವಕರು (ಖಾದಿಮುಲ್ ಹುಜ್ಜಾಜ್) :

ಕರ್ನಾಟಕ ರಾಜ್ಯದ ಹಜ್ ಯಾತ್ರಿಕರ ಕಲ್ಯಾಣವನ್ನು ನೋಡಿಕೊಳ್ಳಲು, ರಾಜ್ಯ ಹಜ್ ಸಮಿತಿಯು ಪ್ರತಿ ವರ್ಷ ಸೌದಿ ಅರೇಬಿಯಾಕ್ಕೆ ಖಾದಿಮುಲ್ ಹುಜ್ಜಾಜ್ (ಸ್ವಯಂ ಸೇವಕರು)ಆಗಿ ಸೂಕ್ತ ವ್ಯಕ್ತಿಗಳನ್ನು ನಿಯೋಜಿಸುತ್ತದೆ. ಮುಂಬೈನ ಭಾರತೀಯ ಹಜ್ ಸಮಿತಿ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಹಜ್ ಸ್ವಯಂಸೇವಕರನ್ನು ನಿಯೋಜಿಸಲಾಗುತ್ತಿದ್ದು, ಇದಕ್ಕಾಗಿ ತಗಲುವ ವೆಚ್ಚದಲ್ಲಿ 50% ನ್ನು ಸರ್ಕಾರ ಮಂಜೂರು ಮಾಡಿದ ಅನುದಾನದಿಂದ ಭರಿಸಲಾಗುತ್ತಿದ್ದು, ಇನ್ನುಳಿದ 50%ನ್ನು ಮುಂಬೈನ ಭಾರತೀಯ ಹಜ್ ಸಮಿತಿ ಭರಿಸುತ್ತದೆ.

ಕಟ್ಟಡ ಆಯ್ಕೆ ತಂಡ:

ಹಜ್ ಸೀಸನ್‌ನಲ್ಲಿ ಭಾರತೀಯ ಹಜ್ ಯಾತ್ರಿಕರಿಗೆ ಸ್ಥಳಾವಕಾಶ ಕಲ್ಪಿಸಲು ಸೌದಿ ಅರೇಬಿಯಾದ ಮಕ್ಕಾ ಮತ್ತು ಮದೀನ ನಗರಗಳಲ್ಲಿ ಸೂಕ್ತ ಕಟ್ಟಡಗಳನ್ನು ಆಯ್ಕೆ ಮಾಡಲು ಭಾರತ ಸರ್ಕಾರದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದಿಂದ ಪ್ರಸ್ತಾವನೆ ಸ್ವೀಕರಿಸಿದಾಗ ರಾಜ್ಯ ಹಜ್ ಸಮಿತಿಯು ಕಟ್ಟಡ ಆಯ್ಕೆ ತಂಡಕ್ಕೆ ಪ್ರತಿನಿಧಿ (ಗಳನ್ನು) ನಿಯೋಜಿಸುತ್ತದೆ.

## 12. ಹಣ ಹಂಚಿಕೆ ಮಾಡಿದ ವಿವರಗಳನ್ನೊಳಗೊಂಡಂತೆ ಕಾರ್ಯಕ್ರಮಗಳ, ಫಲಾನುಭವಿಗಳ ವಿವರ ಹಾಗೂ ಸಹಾಯಧನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ವಿಧಾನ.

ರಾಜ್ಯ ಹಜ್ ಸಮಿತಿಯಲ್ಲಿ ಯಾವುದೇ ಸಹಾಯಧನ ಕಾರ್ಯಕ್ರಮಗಳು ಇರುವುದಿಲ್ಲ

## 13. ರಿಯಾಯತಿಗಳು, ಟಿಪ್ಪಣಿ ಪತ್ರಗಳು ಅಥವಾ ಅಧಿಕಾರ ಪತ್ರಗಳನ್ನು ಪಡೆದವರ ವಿವರಗಳು:

ಸಮಿತಿಯಿಂದ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅಥವಾ ಕಂಪನಿಗಳಿಗೆ ಯಾವುದೇ ರಿಯಾಯಿತಿ ಅಥವಾ ಪರವಾನಗಿ ಅಥವಾ ಅಧಿಕಾರವನ್ನು ನೀಡಲಾಗಿಲ್ಲ.

## 14. ವಿಭಾಗದಲ್ಲಿ ದೊರೆಯುವ ಅಥವಾ ಹೊಂದಿರುವ, ವಿದ್ಯುನ್ಮಾನ ರೂಪಕ್ಕೆ ಇಳಿಸಿರುವ ಮಾಹಿತಿಗಳ ವಿವರ:

ಸಾರ್ವಜನಿಕರಿಗೆ ಹಜ್ ಯಾತ್ರೆಗೆ ಸಂಬಂಧಿಸಿದ ಮಾಹಿತಿಯನ್ನು ನೋಟಿಸ್ ಬೋರ್ಡ್, ಪತ್ರಿಕೆಗಳು ಮತ್ತು ವೆಬ್ ಸೈಟ್ ಮೂಲಕ ನೀಡಲಾಗುತ್ತದೆ.

## 15. ಮಾಹಿತಿ ಪಡೆಯಲು ನಾಗರಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:

**www.karhaj.in** ವೆಬ್‌ಸೈಟ್ ನಿಂದ ಕರ್ನಾಟಕ ರಾಜ್ಯ ಹಜ್ ಸಮಿತಿಯ ಕಾರ್ಯವೈಖರಿಯ ಬಗ್ಗೆ ಸಾರ್ವಜನಿಕರು ಮಾಹಿತಿ ಪಡೆಯಬಹುದು. ಇ–ಮೇಲ್ (**info@karhaj.in**). ಮೂಲಕವೂ ಮಾಹಿತಿಯನ್ನು ಪಡೆಯಬಹುದು.

16. **ಗ್ರಂಥಾಲಯವನ್ನು ಸಾರ್ವಜನಿಕರ ಬಳಕೆಗೆ ನಿರ್ವಹಿಸಿದ್ದಲ್ಲಿ, ಗ್ರಂಥಾಲಯವು ಅಥವಾ ವಾಚನಾಲಯವು ಕಾರ್ಯನಿರ್ವಹಿಸುವ ಸಮಯ ಹಾಗೂ ಸಾರ್ವಜನಿಕರಿಗೆ ಮಾಹಿತಿಯನ್ನು ಪಡೆಯಲು ಇರುವ ಅನುಕೂಲತೆಗಳ ವಿವರ:**

ರಾಜ್ಯ ಹಜ್ ಸಮಿತಿಯಲ್ಲಿ ಗ್ರಂಥಾಲಯ ಅಥವಾ ವಾಚನಾಲಯವನ್ನು ನಿರ್ವಹಿಸಿರುವುದಿಲ್ಲ

**17. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಮತ್ತು ಹುದ್ದೆ ಹಾಗೂ ಇನ್ನಿತರೇ ವಿವರಗಳು**

**ಸಾರ್ವಜನಿಕ ಮಾಹಿತಿ ಅಧಿಕಾರಿ:**
ಶ್ರೀ ಅಬ್ಬಾಸ್ ಷರೀಫ್,
ನೋಡಲ್ ಅಧಿಕಾರಿ
ಕರ್ನಾಟಕ ರಾಜ್ಯ ಹಜ್ ಸಮಿತಿ
' 57/17, "ಹಜ್ ಭವನ" ತಿರುಮೇನಹಳ್ಳಿ,
ಹೆಗಡೆ ನಗರ ಮುಖ್ಯ ರಸ್ತೆ, ಬೆಂಗಳೂರು – 560 064
ದೂರವಾಣಿ ಸಂಖ್ಯೆ: 080–28567673 ಇ–ಮೇಲ್: info@karhaj.in

**ಮೇಲ್ಮನವಿ ಪ್ರಾಧಿಕಾರ**
ಶ್ರೀ ಸರ್ಫರಾಜ್ ಖಾನ್
ಸದಸ್ಯ ಮತ್ತು ಕಾರ್ಯನಿರ್ವಾಹಕ ಅಧಿಕಾರಿ
' 57/17, "ಹಜ್ ಭವನ" ತಿರುಮೇನಹಳ್ಳಿ,
ಹೆಗಡೆ ನಗರ ಮುಖ್ಯ ರಸ್ತೆ, ಬೆಂಗಳೂರು – 560 064
ದೂರವಾಣಿ ಸಂಖ್ಯೆ: 080–28567673 ಇ–ಮೇಲ್: info@karhaj.in